**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ**

ಸಿ.ಸಿ. ನಂ.**237/2021**

**ಫಿರ್ಯಾದುದಾರರುಃ** : ಸರ್ಕಾರದ ಪರವಾಗಿ ಹರಿಹರ ಪೊಲೀಸರು

ವಿರುದ್ಧ

**ಆರೋಪಿ/ತರುಃ** ಸುರೇಂದ್ರ ಬಿನ್ ಶಂಕರಪ್ಪ ಗೌಡ, 35 ವರ್ಷ, ವ್ಯವಸಾಯ, ವಾಸ ಹೊರಬೈಲು, ನಿಲುವಾಗಿಲು ಗ್ರಾಮ, ಕೊಪ್ಪ ತಾಲ್ಲೂಕು.

**ದೋಷಾರೋಪಣೆ**

ಐಶ್ವರ್ಯ ಚಿದಾನಂದ ಪಟ್ಟಣಶೆಟ್ಟಿ, ಬಿ.ಕಾಂ., ಎಲ್.ಎಲ್.ಎಂಃ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 26.08.2020 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಹರಿಹರಪುರ ಠಾಣಾ ವ್ಯಾಪ್ತಿಯ ನಿಲುವಾಗಿಲು ಗ್ರಾಮದ ಹೊರಬೈಲು ಸ.ನಂ. 125 ರ ತೋಟದಲ್ಲಿ ಚಾಸಾ-1 ಜಗದೀಶ ಮತ್ತು ಚಾಸಾ-2 ಗಾಯನ ರವರು ಕಳೆಯನ್ನು ತೆಗೆಯುತ್ತಿರುವಾಗ ಆರೋಪಿಯಾದ ನೀವು ನೀರಿನ ಕಾಲುವೆ ವಿಚಾರವಾಗಿ ಜಗಳ ತೆಗೆದು ಚಾಸಾ.1 ರವರ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದೀರಿ. ಆ ಮೂಲಕ ನೀವು ಭಾ. ದಂ. ಸಂ. ಕಲಂ **447** ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ ಎಂದೂ,

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ವಿಚಾರದಲ್ಲಿ ಜಗಳ ತೆಗೆದು ಚಾಸಾ-1 ರವರಿಗೆ ಕತ್ತಿಯಿಂದ ಹೊಡೆಯಲು ಬಂದಾಗ ಜಗಳ ಬಿಡಿಸಲು ಬಂದ ಚಾಸಾ-2 ಗಾಯನ ರವರ ಎಡಗಾಲಿಗೆ ಬಿದ್ದು ಹಾಗೂ ನೀವು ಹಿಂಭಾಗದಿಂದ ಚಾಸಾ-1 ಜಗದೀಶ ರವರ ಬಲತೋಳಿಗೆ ಕತ್ತಿಯಿಂದ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಆದ ಕಾರಣ ನೀವು ಭಾ.ದಂ.ಸಂ. ಕಲಂ **324** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ವಿಚಾರದಲ್ಲಿ ಜಗಳ ತೆಗೆದು ಕೈಯಿಂದ ಚಾಸಾ-1 ಮುಖಕ್ಕೆ, ಮೈಕೈಗೆ ಗುದ್ದಿ ನೋವುಂಟು ಮಾಡಿದ್ದೀರಿ. ಆದ ಕಾರಣ ನೀವು ಭಾ.ದಂ.ಸಂ. ಕಲಂ **323** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

H. S. Surendra

26/2/24

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ವಿಚಾರದಲ್ಲಿ ಜಗಳ ತೆಗೆದು ಚಾಸಾ-1 ಮತ್ತು 2 ರವರಿಗೆ ಬೋಳಿಮಕ್ಕಗಳೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿರುತ್ತೀರಿ. ಇದರಿಂದಾಗಿ ಈ ನಿಮ್ಮಗಳ ಕೃತ್ಯವು ಭಾರತ ದಂಡ ಸಂಹಿತೆ ಕಲಂ **504** ರ ಅಡಿಯಲ್ಲಿ ಈ ನ್ಯಾಯಾಲಯದ ವಿಚಾರಣೆಯ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ ಆರೋಪಿಯಾದ ನೀವು ಚಾಸಾ-1 ಮತ್ತು 2 ರವರಿಗೆ ಕಾರಿನಿಂದ ಗುದ್ದಿಸಿ ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾರತ ದಂಡ ಸಂಹಿತೆ ಕಲಂ **506** ರ ಅಡಿಯಲ್ಲಿ ಈ ನ್ಯಾಯಾಲಯದ ವಿಚಾರಣೆಯ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧವೆಸಗಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ಒಪ್ಪಿಕೊಳ್ಳುವುದಿಲ್ಲ, ವಿಚಾರಣೆ ಆಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 26.02.2024

26/2/2024

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.

H. S. Surendra.